ಸಂದೇಶ, ಮತ್ತು ಅವುಗಳನ್ನು ಕಳುಹಿಸಿರುವ ವ್ಯಕ್ತಿ ಪ್ರಾಮಾಣಿಕ ಅನ್ನಿಸಿತು. ತೀವ್ರ ಕಳಕಳಿ ಇರುವ ಸಹೃದಯಿ.

ಏನಾದರಾಗಲಿ, ಇದೊಂದು ಹೊಸ ಸವಾಲು, ನಾಲ್ಕುದಿನಗಳೊಳಗೆ ಕಂಡುಹಿಡಿಯಬೇಕು, ಅಪಚಾರಕ್ಕೆ ಅವಕಾಶವಿಲ್ಲದಂತೆ ತಡೆಯಬೇಕು. ಅಭ್ಯರ್ಥಿಗಳ ಭವಿಷ್ಯದ ಪ್ರಶ್ನೆ.

ಸುಳುಹು ಪದ 'ತ್ರಿಕರ' ತಲೆಯಲ್ಲಿ ದಾಖಲಾಯಿತು. ಇನ್ನು ಅದರ ಸುತ್ತ ತಿರುಗಾಡಬೇಕು. ನನಗರಿಯದಂತೆ ನಿದ್ದೆ ಆವರಿಸಿತು.

ಬೆಳಗಾಗುತ್ತಲೇ, ನಿತ್ಯಕರ್ಮಗಳನ್ನು ಮುಗಿಸಿ ಮೆಸ್‌ಗೆ ಹೋದೆ. ಕೆಲವು ಅಭ್ಯರ್ಥಿಗಳು ಅಷ್ಟರಲ್ಲಾಗಲೇ ತಿಂಡಿ ಮುಗಿಸಿ ತೆರಳಿದ್ದರೆ ಮತ್ತೆ ಕೆಲವರು ಅವಸರವಸರವಾಗಿ ಬರುತ್ತಿದ್ದರು. ಒಂಬತ್ತಕ್ಕೆ ತಿಂಡಿ ಸರಬರಾಜು ಸ್ಥಗಿತಕೊಳ್ಳುತ್ತಿತ್ತು. ನನ್ನ ಪರಿಚಯ ಹೆಚ್ಚು ಮಂದಿಗಿಲ್ಲ. ಅಡುಗೆ ಕಂಟ್ರಾಕ್ಟರ್‌ಗೆ ಖಡಕ್ ಸೂಚನೆ ಕೊಟ್ಟು ಊಟ, ತಿಂಡಿ ವಿಷಯದಲ್ಲಿ ರುಚಿ, ಶುಚಿ ಗುಣಮಟ್ಟ ಯಾವುದರಲ್ಲೂ ರಾಜಿ ಆಗುವ ಮಾತೇ ಬರಬಾರದು; ತಪ್ಪಿದಲ್ಲಿ ಭಾರಿ ಬೆಲೆ ತೆರಬೇಕಾದೀತು ಎಂದು ಎಚ್ಚರಿಸಿದ್ದೆ. ಉಪಹಾರಕ್ಕೆ ನೀಡಿದ್ದ ಇಡ್ಲಿ ಚೆನ್ನಾಗಿಯೇ ಇತ್ತು.

'ಸರ್, ಮಧ್ಯಾಹ್ನ ಹನ್ನೆರಡೂವರೆಗೆ ಊಟ ರೆಡಿ ಇರುತ್ತದೆ ಮತ್ತೆ ರಾತ್ರಿ ಎಂಟಕ್ಕೆ, ಹತ್ತರ ತನಕ ಮೆಸ್ ತೆರೆದಿರುತ್ತದೆ' ಕಂಟ್ರಾಕ್ಟರ್ ವರದಿ ಕೊಟ್ಟ. 'ನೀವಿರುವಲ್ಲಿಗೇ ಊಟ, ತಿಂಡಿ ಕಾಫಿ ಕಳುಹಿಸುವ ವ್ಯವಸ್ಥೆ ಇದೆ ಸರ್' ಎಂದ ವಿನೀತನಾಗಿ. ಸರಿ ಎಂದು ತಲೆ ಅಲ್ಲಾಡಿಸಿದೆ.

ಪರೀಕ್ಷಾ ಸಮಿತಿಯಲ್ಲಿ ನಾನು ಒಬ್ಬ ಮುಖ್ಯ ಸದಸ್ಯನಾದ್ದರಿಂದ ಅಭ್ಯರ್ಥಿಗಳ ವಸತಿ, ಊಟದ ವ್ಯವಸ್ಥೆಗೆ ನಾನೇ ಈ ವಿಶ್ವವಿದ್ಯಾಲಯದ ಹಾಸ್ಟೆಲ್ ಮತ್ತು ಕ್ಲಾಸ್ ರೂಮುಗಳನ್ನು ಉಪಯೋಗಿಸಿಕೊಳ್ಳುವ ಸಲಹೆ ನೀಡಿದ್ದೆ. ಹೊರ ಊರಿನಿಂದ ಬರುವ ಅಭ್ಯರ್ಥಿಗಳಿಗೆ ತಂಗಲು ತಿಣಕಾಡಬೇಕಿಲ್ಲ ಮತ್ತು ಹಾಸ್ಟೆಲ್‌ನ ಮೆಸ್‌ನಲ್ಲಿ ಊಟೋಪಚಾರದ ವ್ಯವಸ್ಥೆ ಮಾಡಿಸಿದ್ದೆ. ಅದೇ ಆವರಣದಲ್ಲಿರುವ ಕಾಲೇಜಿನ ರೂಮುಗಳಲ್ಲಿ ಪರೀಕ್ಷೆ ಬರೆಯಬಹುದು. ವಿಶ್ವವಿದ್ಯಾಲಯದ ಪರೀಕ್ಷೆಗಳು ಮುಗಿದು ರಜಾ ದಿನಗಳಾದ್ದರಿಂದ ತೊಂದರೆ ಆಗಲಿಲ್ಲ. ಅಷ್ಟರ ಮಟ್ಟಿಗೆ ವಿಶ್ವವಿದ್ಯಾಲಯಕ್ಕೂ ಆದಾಯ, ನಮ್ಮದೇ ಬೋರ್ಡಿಂಗ್, ಲಾಜಿಂಗ್ ಆದ್ದರಿಂದ ಅಭ್ಯರ್ಥಿಗಳಿಗೆ ಕೊಡುವ ದಿನಭತ್ಯೆಯಲ್ಲೂ ಉಳಿತಾಯ. ಹೀಗಾಗಿ ನನ್ನ ಸಲಹೆಗೆ ಎಲ್ಲರೂ ಒಪ್ಪಿಗೆ ಸೂಚಿಸಿದ್ದರು.

ನಾನು ಪರೀಕ್ಷೆಗಳು ಮೊದಲಾಗುವ ಮುನ್ನಾ ದಿನವೇ ವಿಶ್ವವಿದ್ಯಾಲಯದ ಗೆಸ್ಟ್ ಹೌಸ್‌ಗೆ ತೆರಳಿದ್ದೆ. ಪರೀಕ್ಷೆ ಮುಗಿಯುವವರೆಗೂ ಅಲ್ಲೇ ಠಿಕಾಣಿ.

★★★

ಒಂಬತ್ತುವರೆಯ ಹೊತ್ತಿಗೆ ಪರೀಕ್ಷೆ ಬರೆಯುವ ಮೂರೂ ಕೋಣೆಗಳು ಭರ್ತಿಯಾಗತೊಡಗಿದವು. ಟೇಬಲ್ ಚೇರ್ ಸಿಸ್ಟಮ್‌ನಲ್ಲಿ ಬರೆಯಲು ಅವಕಾಶ. ಉದ್ದ ಸಾಲು, ಅಡ್ಡ ಸಾಲುಗಳಲ್ಲಿ ಟೇಬಲ್‌ಗಳನ್ನು ಇರಿಸಿದ್ದೆವು. ತಮ್ಮೊಂದಿಗೆ ತಂದಿದ್ದ ಪುಸ್ತಕ, ಮೊಬೈಲ್ ವಗೈರೆಗಳನ್ನು ವೇದಿಕೆಯಲ್ಲಿ ಇಡಲು ಹೇಳಿ ಉತ್ತರ ಪತ್ರಿಕೆ ಹಂಚಿ, ಅದರಲ್ಲಿ ಕೇಳಿರುವ ಮಾಹಿತಿ ತುಂಬುವಂತೆ ಸೂಚಿಸಿ ಸರಿಯಾಗಿ ಹತ್ತು ಗಂಟೆಗೆ ಪ್ರಶ್ನೆಪತ್ರಿಕೆಯನ್ನು ಹಂಚಿಯಾಯ್ತು. ಇನ್ನು ಹಾಜರಿ ದಾಖಲಾತಿ ಪ್ರಕ್ರಿಯೆ. ಇಲಾಖೆ ನೀಡಿರುವ ಗುರುತಿನ ಚೀಟಿ ಇರದೇ ಪರೀಕ್ಷೆ ಬರೆಯುವ ಪ್ರಶ್ನೆಯೇ ಇಲ್ಲ ಎಂದು ಸಾರಿದ್ದೆ. ಒಂದು ಸುತ್ತು ಮೂರೂ ಕೋಣೆಗಳಿಗೆ ಇಣುಕಿ ತಾತ್ಕಾಲಿಕವಾಗಿ ಒದಗಿಸಿದ್ದ ನನ್ನ ಕಚೇರಿಗೆ ಬಂದೆ.

ಮತ್ತೆ 'ತ್ರಿಕರ' ಕಾಡಿತು. ಬಹುಶಃ ತಪ್ಪು ನಡೆದ ನಂತರ ಕಂಡುಹಿಡಿಯುವ ಪ್ರಕ್ರಿಯೆಗಿಂತ, ತಪ್ಪು ನಡೆಯದಂತೆ ಅಥವಾ ನಡೆವಾಗ ಸಾಕ್ಷಿಸಮೇತ ತಪ್ಪಿತಸ್ಥನನ್ನು ಹಿಡಿದರೆ ಅಪೇಕ್ಷಿತ ಫಲ, ಅಭ್ಯರ್ಥಿಗಳಿಗೆ ನ್ಯಾಯ ಸಿಗುವುದೆಂಬ ನಂಬಿಕೆಯಿಂದ ಸುಳುಹನ್ನು ಕಳುಹಿಸಿರಬಹುದೇ? 'ತ್ರಿ' ಎಂದರೆ ಮೂರು ಎಂಬ